ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಮಾನ್ಯ ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 732 |
| ಉತ್ತರಿಸಬೇಕಾದ ದಿನಾಂಕ: | 26.07.2019 |
| ಉತ್ತರಿಸುವ ಸಚಿವರು: | ವಸತಿ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) "ಹೊಸ ಕೊಳಗೇರಿ ನೀತಿ ಯೋಜನೆ" ಯನ್ನು ಯಾವಾಗ ಜಾರಿಗೆ ತರಲಾಯಿತು; ಈ ಯೋಜನೆಯ ರೂಪುರೇಷೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಕೊಳಗೇರಿ ಪ್ರದೇಶಗಳ ಅಭಿವೃದ್ಧಿ ನೀತಿ-2016 ರನ್ನು ಸರ್ಕಾರವು ದಿನಾಂಕ: 17-06-2016 ರಂದು ಜಾರಿಗೆ ತಂದಿದೆ.<br>**ನೀತಿಯ ಉದ್ದೇಶಗಳು:**<br>• ಕೊಳಗೇರಿಗಳ ಸಮಗ್ರ ಅಭಿವೃದ್ಧಿಗಾಗಿ ಚೌಕಟ್ಟನ್ನು ಒದಗಿಸುವುದು.<br>• ಮೂಲಭೂತ ಸೇವೆಗಳು ದೊರಕುವಂತೆ ಖಚಿತಪಡಿಸಿಕೊಳ್ಳುವುದು.<br>• ಸಾಮಾಜಿಕ ಮೂಲಭೂತ ವ್ಯವಸ್ಥೆಗಳನ್ನು ಒದಗಿಸಲು ಇಲಾಖೆಗಳ ಸಮನ್ವಯವನ್ನು ಸಾಧ್ಯವಾಗಿಸುವುದು<br>• ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ಯೋಜನೆಗಳನ್ನು ಒಮ್ಮುಖಗೊಳಿಸುವುದು. |
| ಆ) ಈ ಯೋಜನೆಯು ಜಾರಿಯಾದಾಗಿನಿಂದ ಇದುವರೆವಿಗೂ ಮೀಸಲಿಟ್ಟ ಅನುದಾನವೆಷ್ಟು; ಹಾಗೂ ಖರ್ಚು ಮಾಡಲಾದ ಅನುದಾನವೆಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಈ ಯೋಜನೆ ಜಾರಿ ಮಾಡಲು ಯಾವುದೇ ಅನುದಾನ ಮೀಸಲು ಇರುವುದಿಲ್ಲ.. |
| ಇ) ಈ ಯೋಜನೆಯನ್ವಯ ರಾಜ್ಯದಲ್ಲಿ ಕೊಳಗೇರಿ ಪ್ರದೇಶಗಳ ಸಮೀಕ್ಷೆಯನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಸಮೀಕ್ಷೆಯ ಪ್ರತಿ ನೀಡುವುದು; | ಕೊಳಗೇರಿ ಅಭಿವೃದ್ಧಿ ನೀತಿಯು ಜಾರಿಗೆ ಬಂದ ಮೇಲೆ ಕೊಳಚೆ ಪ್ರದೇಶಗಳ ಸಮಗ್ರ ಮಾಹಿತಿ ಸಂಗ್ರಹಿಸಲು ಕೊಳಚೆ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. (ಸಮೀಕ್ಷೆಯ ಜಿಲ್ಲಾವಾರು ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.) |
| ಈ) ರಾಜ್ಯದ ತಾಲ್ಲೂಕು ಕೊಳಗೇರಿ ಪ್ರದೇಶಗಳವಾರು ಅನುದಾನದ ಹಂಚಿಕೆಯಲ್ಲಿ ತಾರತಮ್ಯವಾಗಿರು ವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?(ಮಾಹಿತಿ ನೀಡುವುದು) | ಅನುದಾನವನ್ನು ಕೊಳಗೇರಿ ಪ್ರದೇಶಗಳ ಸ್ಥಳ ಪರಿಶೀಲನೆ ಮಾಡಿ ಅವಶ್ಯಕತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿದ್ದು, ಯಾವುದೇ ತಾರತಮ್ಯವಾಗಿರುವುದಿಲ್ಲ. |

ಕಡತ ಸಂಖ್ಯೆ:ವಇ 31 ಕೊಮಂಇ 2019

(ವಿ.ಸೋಮಣ್ಣ)
ವಸತಿ ಸಚಿವರು